# ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ

4ನೇ ಮಹಡಿ, ಕೃಷಿ ಭವನ, ನೃಪತುಂಗ ರಸ್ತೆ, ರಾಣಿ ಚೆನ್ನಮ್ಮ ವೃತ್ತ, ಬೆಂಗಳೂರು– 560 001

ದೂರವಾಣಿ ಸಂಖ್ಯೆ: 080–22115291/92 E-mail:kscpcr@gmail.com

ಸಂಖ್ಯೆ:ಕರಾಮಹರಆ/ಎಸ್ಎಸ್ಎಲ್ಸಿ, ಪರೀಕ್ಷೆ ರದ್ದು/ಶಿಫಾರಸ್ಸು/2021-22 ದಿನಾಂಕ: 03-06-2021

**ಇವರಿಗೆ,**
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ, ಬೆಂಗಳೂರು

ಆಯುಕ್ತರು,
ಸಾರ್ವಜನಿಕ ಶಿಕ್ಷಣ ಇಲಾಖೆ,
ಕೆ.ಆರ್. ವೃತ್ತ, ನೃಪತುಂಗ ರಸ್ತೆ, ಬೆಂಗಳೂರು

**ಮಾನ್ಯರೇ,**

**ವಿಷಯ: ಎಸ್ ಎಸ್ ಎಲ್ ಸಿ ಪರೀಕ್ಷೆ ರದ್ದು ಮಾಡುವ ಬಗ್ಗೆ ಶಿಫಾರಸ್ಸುಗಳನ್ನು ಸಲ್ಲಿಸುತ್ತಿರುವ ಕುರಿತು.**

ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗವನ್ನು 2009ರ ಜುಲೈನಲ್ಲಿ ಕರ್ನಾಟಕ ರಾಜ್ಯ ಸರ್ಕಾರವು ರಚಿಸಿತು. 2009 ರಿಂದ ಅಧ್ಯಕ್ಷರು ಮತ್ತು ಆರು ಜನ ಸದಸ್ಯರನ್ನೊಳಗೊಂಡ ಸಮಿತಿಯು ಕಾರ್ಯ ನಿರ್ವಹಿಸುತ್ತಿದೆ. ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗವು ಮಕ್ಕಳ ಹಕ್ಕುಗಳ ಉಲ್ಲಂಘನೆಯ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿವಿಲ್ ನ್ಯಾಯಾಲಯದಂತೆ ಕಾರ್ಯನಿರ್ವಹಿಸುವ ಅಧಿಕಾರವನ್ನು ಹೊಂದಿರುತ್ತದೆ.

ಮಕ್ಕಳ ಹಕ್ಕುಗಳು ಉಲ್ಲಂಘನೆಯಾದ ಪ್ರಕರಣಗಳನ್ನು ಆಯೋಗವು ದೂರುಗಳನ್ನು ಪಡೆದು ಅಥವಾ ತಾನಾಗಿಯೇ ಸ್ವ-ಪ್ರೇರಣೆಯಿಂದ (ಸುವೋ–ಮೋಟೋ) ದೂರು ದಾಖಲಿಸಿಕೊಂಡು ಕ್ರಮಗಳನ್ನು ಕೈಗೊಳ್ಳಬಹುದಾಗಿರುತ್ತದೆ. **ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ ಮಕ್ಕಳ ಹಕ್ಕು ಕಾಯ್ದೆ–2009, ಮಕ್ಕಳ ಮೇಲಿನ ಲೈಂಗಿಕ ಅಪರಾಧ ತಡೆ (ಪೋಕ್ಸೋ) ಕಾಯ್ದೆ–2012 ಹಾಗೂ ಬಾಲ ನ್ಯಾಯ (ಆರೈಕೆ ಮತ್ತು ರಕ್ಷಣೆ) ಕಾಯಿದೆ–2015ರ ಮೇಲುಸ್ತುವಾರಿ ಜವಾಬ್ದಾರಿಯನ್ನು ಹೊಂದಿರುತ್ತದೆ.**

ವಿಷಯಕ್ಕೆ ಸಂಬಂಧಿಸಿದಂತೆ, ಕೋವಿಡ್–19 ಪರಿಣಾಮದಿಂದಾಗಿ ಶಾಲೆಗಳು ಪೂರ್ಣ ಪ್ರಮಾಣದಲ್ಲಿ ತೆರೆದಿರುವುದಿಲ್ಲ, ಮಕ್ಕಳಿಗೆ ಪಾಠ ಬೋಧನೆಗಳು ಸಂಪೂರ್ಣವಾಗಿ ಲಭ್ಯವಾಗಿರುವುದಿಲ್ಲ, ಆನ್‌ಲೈನ್‌ನಲ್ಲಿ ನೀಡಿದ್ದರೂ ಬಹು ವರ್ಗದ ಗ್ರಾಮೀಣ ಮಕ್ಕಳನ್ನು ಮತ್ತು ಗಿರಿಜನ ಮಕ್ಕಳನ್ನು ತಲುಪಲಾಗಿಲ್ಲ, ಶಾಲಾ ಚಟುವಟಿಕೆಗಳು ಸ್ಥಬ್ಧಗೊಂಡಿದ್ದು, ತರಗತಿಗಳಿಗೆ ಪರ್ಯಾಯವಾಗಿ ಆನ್‌ಲೈನ್ ತರಗತಿಗಳು ಖಾಸಗಿ ಶಾಲೆಯ ಶ್ರೀಮಂತ ಮತ್ತು ಮಧ್ಯಮ ವರ್ಗದ ಮಕ್ಕಳನ್ನು ಮಾತ್ರ ತಲುಪಿವೆ. ಸರ್ಕಾರಿ ಶಾಲಾ ಮಕ್ಕಳಿಗೆ ಬಹಳ ಉಪಯುಕ್ತವಾಗಿದ್ದ ವಿದ್ಯಾಗಮವನ್ನೂ ಸಹಾ ನಿಲ್ಲಿಸಲಾಗಿತ್ತು. ಶಾಲೆಯು ಮುಚ್ಚಿರುವುದರಿಂದ ಮಕ್ಕಳು ಕಲಿಕೆಯಲ್ಲಿ ಅನೇಕ ರೀತಿಯ ಸಮಸ್ಯೆಗಳನ್ನು ಎದುರಿಸಿದ್ದಾರೆ.

ಅನೇಕ ಎಸ್ ಎಸ್ ಎಲ್ ಸಿ ವಿದ್ಯಾರ್ಥಿಗಳು ಮತ್ತು ಅವರ ಪೋಷಕರು ಆಯೋಗಕ್ಕೆ ಮತ್ತು ಸದ್ಯರಿಗೆ ಕರೆ ಮಾಡಿ ತಮ್ಮ ಸಮಸ್ಯೆಗಳನ್ನು ತೋಡಿಕೊಂಡಿದ್ದಾರೆ. ಅವರ ಪ್ರಕಾರ ಈ ಕೋರೋನ ಸೋಂಕಿನಿಂದ ಪಾಠ ಪ್ರವಚನಗಳು ಸರಿಯಾಗಿ ನಡೆದಿರುವುದಿಲ್ಲ, ಮಕ್ಕಳಿಗೆ ಕಲಿಕೆಗೆ ಪೂರಕ ವಾತಾವರಣ ಇರುವುದಿಲ್ಲ, ಕೋವಿಡ್ ಭಯದಲ್ಲಿ ದಿನದೂಡುವ ಪರಿಸ್ಥಿತಿ ಇರುವಾಗ ಈ ವರ್ಷದ 10ನೇ ತರಗತಿ ಪರೀಕ್ಷೆ ಹೇಗೆ ಬರೆಯುವುದು, ಇನ್ನೂ ಕೆಲವು ಖಾಸಗಿ ಶಾಲೆಯ ಮಕ್ಕಳಿಗೆ, ಕೆಲವೇ ಸರ್ಕಾರಿ ಶಾಲೆಯ ಮಕ್ಕಳಿಗೆ ಆನ್ ಲೈನ್ ಭೋದನೆ ಲಭಿಸಿದ್ದು, ಇನ್ನೂ ಅನೇಕ ಬಹುವರ್ಗದ ಗ್ರಾಮೀಣ ಪ್ರದೇಶದ ಸರ್ಕಾರಿ ಶಾಲೆಯ ಮಕ್ಕಳು ಮತ್ತು ಗಿರಿಜನ ಮಕ್ಕಳು ಈ ವ್ಯವಸ್ಥೆಯಿಂದ ವಂಚಿತರಾಗಿದ್ದಾರೆ. ಅವರಿಗೆ ವಿದ್ಯುತ್, ಮೊಬೈಲ್ ಪೋನ್, ಇಂಟರ್‌ನೆಟ್ ವ್ಯವಸ್ಥೆಗಳಿಲ್ಲದಿರುವುದರಿಂದ ತುಂಬಾ ಆತಂಕಕ್ಕೆ ಒಳಗಾಗಿ 10ನೇ ತರಗತಿ ಪರೀಕ್ಷೆ ರದ್ದುಗೊಳಿಸಲು ಕೋರಿದ್ದಾರೆ.

ಇದನ್ನು ಗಂಭೀರವಾಗಿ ಪರಿಗಣಿಸಿದ ಆಯೋಗವು ಮಕ್ಕಳ ಅಭಿಪ್ರಾಯಕ್ಕೆ ಮನ್ನಣೆ ನೀಡಲು ಮತ್ತು ಅವರ ಸ್ಥಿತಿಗತಿ ಅರಿತು ಸರ್ಕಾರಕ್ಕೆ ಸೂಕ್ತ ನಿರ್ದೇಶನ ನೀಡಲು ರಾಜ್ಯದಲ್ಲಿ ರ್‍ಯಾಂಡಮ್ ಸಮೀಕ್ಷೆಯನ್ನು ಕೈಗೊಳ್ಳಲಾಯಿತು. ಈ ಸಮೀಕ್ಷೆಯಲ್ಲಿ ಶಾಲಾ

ವ್ಯವಸ್ಥೆಯ ಮೂಲ ಭಾಗೀದಾರರಾದ ಮಕ್ಕಳು, ಶಾಲಾ ಶಿಕ್ಷಕರು, ಪೋಷಕರು ಮತ್ತು ಎಸ್ ಡಿ ಎಂ ಸಿ ಸದಸ್ಯರುಗಳನ್ನು ಪೋನ್ ಮೂಲಕ ಸಂಪರ್ಕಿಸಿ ಅವರ ಅಭಿಪ್ರಾಯಗಳನ್ನು ಸಂಗ್ರಹಿಸಿದೆ.

**ಈ ಸಮೀಕ್ಷೆಯ ಫಲಿತಗಳು ಈ ಕೆಳಗಿನಂತಿವೆ.**

| ಕ್ರ.ಸಂ | ರ್‍ಯಾಂಡಮ್ ಸಮೀಕ್ಷೆ ಒಳಪಡಿಸಿದ 10ನೇ ಓದುತ್ತಿರುವ ಮಕ್ಕಳ ಶಾಲೆಗಳು ಶೇ | | | ಕ್ರ.ಸಂ | ರ್‍ಯಾಂಡಮ್ ಸಮೀಕ್ಷೆ ಒಳಪಡಿಸಿದ ಕುಟುಂಬಗಳು ಹಿನ್ನಲೆ, ವರ್ಗವಾರು ಶೇ | | | ಕ್ರ.ಸಂ | (ರ್‍ಯಾಂಡಮ್ ಸಮೀಕ್ಷೆಯಲ್ಲಿ )ಕೋವಿಡ್‌ನ ಸಂದರ್ಭದಲ್ಲಿ ಎಸ್‌ಎಸ್‌ಎಲ್‌ಸಿ,ಪರೀಕ್ಷೆ ಬರೆಯಲು ವಿದ್ಯಾರ್ಥಿಗಳ ಅಭಿಪ್ರಾಯ ಶೇ | |
|---|---|---|---|---|---|---|---|---|---|---|
| 01 | ಸರ್ಕಾರಿ | 59.6% | | 1 | ಗ್ರಾಮೀಣಾ | 54% | | 1 | ಪರೀಕ್ಷೆ ಬೇಕು | 31.5% |
| 02 | ಖಾಸಗೀ | 16.6% | | 2 | ನಗರ | 37% | | 2 | ಪರೀಕ್ಷೆ ಬೇಡ | 68.5 |
| 03 | ಅನುದಾನಿತ | 23.8% | | 3 | ಕೊಳಗೇರಿ | 05% | | | | |
| | | | | 4 | ಗಿರಿಜನ ಪ್ರದೇಶ | 04% | | | | |

ಈ ರ್‍ಯಾಂಡಮ್ ಸಮೀಕ್ಷೆಯ ಪ್ರಕ್ರಿಯೆಯಲ್ಲಿ ಎಸ್‌ಡಿಎಂಸಿಯ ಶೇ 26.4 ಸದಸ್ಯರು, ಶಿಕ್ಷಕರು ಶೇ 37.5 ಮತ್ತು ಪೋಷಕರು ಶೇ 36.1 ಭಾಗವಹಿಸಿ ತಮ್ಮ ಅಭಿಪ್ರಾಯ ನೀಡಿರುತ್ತಾರೆ. ಇವರಲ್ಲಿ ಪರೀಕ್ಷೆ ಬೇಡ ಎಂದು ಶೇ 72.4 ತಿಳಿಸಿದರೆ, ಪರೀಕ್ಷೆ ನೆಡೆಸಿ ಎಂದು ಶೇ27.4 ಜನರು ತಮ್ಮ ಅಭಿಪ್ರಾಯವನ್ನು ತಿಳಿಸಿದ್ದಾರೆ. ಕೋವಿಡ್‌ನ ಈ ಸಮಯದಲ್ಲಿ ಶಾಲಾ ಮಕ್ಕಳಿಗೆ ಭಯ ಮುಕ್ತ ಮತ್ತು ಸುರಕ್ಷತಾ ವಾತಾವರಣ ನಿರ್ಮಿಸುವುದು ಮುಖ್ಯವಾಗಿದೆ. ಶಾಲಾ ತರಗತಿಗಳಲ್ಲಿ ಪೂರ್ಣ ಪ್ರಮಾಣದ ಕಲಿಕೆಯಾಗಿಲ್ಲ, ಎನ್ನುವುದು ಮಕ್ಕಳಿಗೆ ಮತ್ತು ಪೋಷಕರಿಗೆ ತೀವ್ರ ನಿರಾಶೆ ಮತ್ತು ಆಂತಕವನ್ನು ಹುಟ್ಟಿಸಿರುತ್ತದೆ. ಸರ್ಕಾರವು ಈ ಕುರಿತು ಒಂದು ದೃಢ ನಿರ್ಧಾರವನ್ನು ಕೈಗೊಳ್ಳಬೇಕಾದ ಅವಶ್ಯವಿರುತ್ತದೆ.

ಈ ಎಲ್ಲಾ ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಆಯೋಗವು ಈ ಕೆಳಕಂಡಂತೆ ಶಿಫಾರಸ್ಸುಗಳನ್ನು ಮಾಡುತ್ತದೆ.

1. ಈ ವರ್ಷದ ಎಸ್ ಎಸ್ ಎಲ್ ಸಿ ಪರೀಕ್ಷೆಗಳನ್ನು ರದ್ದುಗೊಳಿಸುವುದು.
2. ಕೇಂದ್ರದ ಸಿ ಬಿ ಎಸ್ ಸಿ ಮಾದರಿಯಲ್ಲಿ ಪರ್ಯಾಯ ವ್ಯವಸ್ಥೆ ಮಾಡುವುದು.
3. ಮಕ್ಕಳಿಗೆ ಪೌಷ್ಠಿಕ ಆಹಾರವನ್ನು ಕೂಡಲೇ ನೀಡುವುದು.
4. ಕಲಿಕೆಯ ನಷ್ಟ ಹೊಂದಿದ ಮಕ್ಕಳಿಗೆ ಕಲಿಕೆ ಕಲಿಸಲು ಕಾರ್ಯಯೋಜನೆ ರೂಪಿಸಲು ಕ್ರಮ ಕೈಗೊಳ್ಳುವುದು
5. ಮಕ್ಕಳಿಗೆ ಪಠ್ಯಪುಸ್ತಕ ಹಾಗೂ ಓದುವ ಸಾಮಗ್ರಿಗಳನ್ನು ಅವರು ಇರುವಲ್ಲಿಗೆ ತಲುಪಿಸುವುದು.

ಸಿಬಿಎಸ್‌ಸಿ ಹಾಗೂ ಇನ್ನಿತ್ತರ ಬೋರ್ಡ್‌ಗಳು ಪರೀಕ್ಷೆಗಳನ್ನು ರದ್ದುಮಾಡಿರುವುದರಿಂದ ನಮ್ಮ ರಾಜ್ಯದಲ್ಲಿ ಪರೀಕ್ಷೆ ಕೈಗೊಂಡರೆ ಮಕ್ಕಳಲ್ಲಿ ತಾರತಮ್ಯ ಮಾಡಿದಂತಲ್ಲವೇ?. ಪರೀಕ್ಷೆಯ ಮುಖ್ಯ ಉದ್ದೇಶವೇ ಕಲಿಕೆಯ ಮೌಲ್ಯಮಾಪನ ಮಾಡುವುದು. ಆದರೆ ಕಲಿಕೆಯೇ ಆಗಿಲ್ಲದಿರುವಾಗ ಪರೀಕ್ಷೆ ನೆಡೆಸುವ ಬಗ್ಗೆ ಮಕ್ಕಳು ಮತ್ತು ಪೋಷಕರು ಆತಂಕಕ್ಕೆ ಒಳಗಾಗಿದ್ದಾರೆ. ಆಯೋಗದಿಂದ ಕೈಗೊಂಡ ರ್‍ಯಾಂಡಮ್ ಸಮೀಕ್ಷೆಯಲ್ಲಿ ಪರೀಕ್ಷೆ ಬೇಡ ಎನ್ನುವ ಅವರ ಅಭಿಪ್ರಾಯಗಳನ್ನು ಪರಿಗಣಿಸಿ, ರಾಜ್ಯದ ಮಕ್ಕಳ ಆರೋಗ್ಯದ ಹಿತ ದೃಷ್ಟಿಯಿಂದ ಎಸ್‌ಎಸ್‌ಎಲ್‌ಸಿ ಪರೀಕ್ಷೆಗಳನ್ನು ರದ್ದುಮಾಡುವ ನಿಟ್ಟಿನಲ್ಲಿ ಆಯೋಗದಿಂದ ಹೊರಡಿಸಿರುವ ಈ ಮೇಲ್ಕಂಡ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸಲು ಸೂಕ್ತ ಕ್ರಮ ಕೈಗೊಂಡು, ಕೈಗೊಂಡ ಕ್ರಮದ ವರದಿಯನ್ನು ಆಯೋಗಕ್ಕೆ ಸಲ್ಲಿಸುವಂತೆ ತಮ್ಮನ್ನು ಕೋರಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

Sd/-

ಅಧ್ಯಕ್ಷರು,
ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ,
ಬೆಂಗಳೂರು

ಪ್ರತಿಗಳನ್ನು

1. ಮಾನ್ಯ ಸಚಿವರು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ ಇವರಿಗೆ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
2. ಮಾನ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.